ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ: ಪಪೂಶಿ/ಶೈಶಾ/ಪ.ಪು.ಮು.ಟೆಂ.08/2016-17 ದಿನಾಂಕ: 18 -02-2017.

## ಜ್ಞಾಪನ

**ವಿಷಯ**:- ಪದವಿ ಪೂರ್ವ ಶಿಕ್ಷಣದ ಪಠ್ಯಪುಸ್ತಕಗಳನ್ನು ಮುದ್ರಿಸುವ ಕುರಿತು.

**ಉಲ್ಲೇಖ**:-1) ಈ ಕಛೇರಿ ಸಮಸಂಖ್ಯೆ ಅಧಿಸೂಚನೆ ದಿನಾಂಕ:08-02-2017.

2) ಶ್ರೀ ಬಿ.ಎ. ಸತ್ಯ ಕುಮಾರ್, ಮಾಲೀಕರು, ಸುಬ್ರಹ್ಮಣ್ಯೇಶ್ವರ ಬುಕ್ ಡಿಪೋ, ಬೆಂಗಳೂರು, ರವರ ಮನವಿ ದಿನಾಂಕ:16-02-2017.

-*-

ಉಲ್ಲೇಖಿತ ಅಧಿಸೂಚನೆಯ ಅನುಬಂಧ-6ರಲ್ಲಿ ಮುದ್ರಕರಿಗೆ ಇರಬೇಕಾದ ಅರ್ಹತೆಗಳಲ್ಲಿ printing machinery ನಲ್ಲಿ 578 ಎಂ.ಎಂ. ಕಟ್-ಆಫ್ ಮುದ್ರಣ ಯಂತ್ರ ಇರಬೇಕು ಎಂಬ ನಿಬಂಧನೆ ಇರುತ್ತದೆ. ಪದವಿ ಪೂರ್ವ ಇಲಾಖೆಯ ಬಹಳಷ್ಟು ಪುಸ್ತಕಗಳು 1/4 ಕ್ರೌನ್ ಅಳತೆಯವು ಇರುವುದರಿಂದ, 508 ಕಟ್-ಆಫ್ ಮುದ್ರಣ ಯಂತ್ರ ಸಾಕಾಗುತ್ತದೆ ಎಂಬ ಮನವಿಯನ್ನು ಉಲ್ಲೇಖ-2ರಂತೆ ಸಲ್ಲಿಸಿದ್ದು, ಸದರಿ ಮನವಿಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

"ಪದವಿ ಪೂರ್ವ ಶಿಕ್ಷಣ ಇಲಾಖೆಯ ಎ-4 ಅಳತೆಯ ಪಠ್ಯಪುಸ್ತಗಳನ್ನು ಮುದ್ರಿಸಲು 578 ಎಂ.ಎಂ. ಕಟ್-ಆಫ್ ಮುದ್ರಣ ಯಂತ್ರವನ್ನು ಹೊಂದಿರುವ ಮುದ್ರಕರು ಅರ್ಜಿ ಸಲ್ಲಿಸಬಹುದು ಹಾಗೂ 1/4 ಕ್ರೌನ್ ಅಳತೆಯ ಪಠ್ಯಪುಸ್ತಕಗಳನ್ನು ಮುದ್ರಿಸಲು 508 ಎಂ.ಎಂ. ಕಟ್-ಆಫ್ ಮುದ್ರಣ ಯಂತ್ರ ಹೊಂದಿರುವವರು ಮುದ್ರಿಸಬಹುದು".

ಮೇಲಿನ ಅಂಶದ ಜೊತೆ ಈ ಕೆಳಕಂಡ ಹೆಚ್ಚುವರಿ ಸೂಚನೆಗಳನ್ನು ನೀಡಿದ್ದು, ಅದರ್ನ್ವತೆ ಕ್ರಮವಹಿಸುವುದು:

1) ಅರ್ಜಿ ಸಲ್ಲಿಸುವ ದಿನಾಂಕವನ್ನು ದಿನಾಂಕ: 23-02-2017ರ ವರೆಗೆ ವಿಸ್ತರಿಸಿದೆ.
2) ಒಂದೇ ವಿಷಯದ ಪಠ್ಯಪುಸ್ತಕದ ಮುದ್ರಣದ ಅಗತ್ಯತೆಗೆ ಒಂದಕ್ಕಿಂತ ಹೆಚ್ಚು ಮುದ್ರಕರು ಅರ್ಜಿ ಸಲ್ಲಿಸಿದಲ್ಲಿ, ಈ ಕಛೇರಿಯು ಆಸಕ್ತ ಮುದ್ರಕರೊಂದಿಗೆ ಸಂಧಾನ ನಡೆಸಿ ಪ್ರತಿಗಳನ್ನು ಮುದ್ರಿಸಲು ಹಂಚುವ ಹಕ್ಕನ್ನು ಕಾಯ್ದಿರಿಸಿದೆ.
3) ಅರ್ಜಿಯೊಂದಿಗೆ ಸಲ್ಲಿಸಬೇಕಾದ ಮೊತ್ತವನ್ನು ಪ್ರತಿ ವಿಷಯಕ್ಕೆ ಲೆಕ್ಕಿಸಿ, ಒಟ್ಟು ಮೊತ್ತಕ್ಕೆ ಒಂದೇ ಡಿ.ಡಿ.ಯನ್ನು ಸಲ್ಲಿಸುವುದು.
4) ಈ ಹಿಂದೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಪಠ್ಯಪುಸ್ತಕಗಳನ್ನು ಮುದ್ರಿಸಿರುವ ಸಂಸ್ಥೆಗಳು 2016ರಲ್ಲಿ ಮುದ್ರಣ ಮಾಡಿರುವ ಪಠ್ಯಪುಸ್ತಕಗಳ ಪಿಡಿಎಫ್ ಮತ್ತು ಸೌರ್ಸ್ ಫೈಲ್‌ಅನ್ನು ಈ ಕಛೇರಿಗೆ ಸಲ್ಲಿಸದಿದ್ದಲ್ಲಿ, ಈ ಸಾಲಿನ ಪಠ್ಯಪುಸ್ತಕಗಳ ಮುದ್ರಣಕ್ಕೆ ಸದರಿ ಸಂಸ್ಥೆಗಳು ಸಲ್ಲಿಸುವ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ.
5) ಮುದ್ರಣಕ್ಕೆ ಕಾರ್ಯಾದೇಶ ನೀಡದ ಪ್ರಸಂಗಗಳಲ್ಲಿ, ಮುದ್ರಕರು ಸಲ್ಲಿಸಿದ ಮೊತ್ತವನ್ನು ಹಿಂದಿರುಗಿಸಲಾಗುವುದು.

For ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು

1) ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು – ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು – ರವರಿಗೆ ಮಾಹಿತಿಗಾಗಿ
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು – ರವರಿಗೆ ಮಾಹಿತಿಗಾಗಿ
4) ಮುದ್ರಣ ಸಂಸ್ಥೆಗಳಿಗೆ – ಅಗತ್ಯ ಕ್ರಮಕ್ಕಾಗಿ
5) ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು– ಇವರಿಗೆ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ ಕೋರಿದೆ.
6) ಇ–ಗವರ್ನೆನ್ಸ್ ಶಾಖೆಗೆ – ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು – ಅಗತ್ಯ ಕ್ರಮಕ್ಕಾಗಿ
7) ಕಛೇರಿ ಪ್ರತಿ